

ಕನ್ನಡ ಚಿತ್ರರಂಗವನ್ನು ಈಗಷ್ಟೇ ಪ್ರವೇಶಿಸುತ್ತಿರುವ ಹೊಸಮುಖ ಯಶಾ. ಮಾಡೆಲಿಂಗ್ ಮತ್ತೆ ಶಾಸ್ತ್ರೀಯ ನೃತ್ಯಪ್ರಕಾರಗಳ ಹಿನ್ನೆಲೆಯುಳ್ಳ ಈ ಹುಡುಗಿಗೆ ಕನ್ನಡದ ಎಲ್ಲ ಮುಖ್ಯ ನಟರ ಜೊತೆಗೂ ತೆರೆ ಹಂಚಿಕೊಳ್ಳುವ ಹಂಬಲ.

■ ಪದ್ಮನಾಭ ಭಟ್

# ಯಶದ ಆಸೆಯಲ್ಲಿ ಯಶಾ

ತನ್ನ ಹೆಸರಿನಲ್ಲಿಯೇ 'ಯಶ'ವನ್ನು ಇಟ್ಟುಕೊಂಡಿರುವ ಯಶಾ ಶಿವಕುಮಾರ್ ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದವರು. ಉಜಿರೆಯ ಆಳ್ವಾಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಮುಗಿಸಿರುವ ಅವರೀಗ ಮತ್ತೆ 'ಪದವಿಪೂರ್ವ' ತರಗತಿಗಳಿಗೆ ಎಡತಾಕುತ್ತಿದ್ದಾರೆ. ಎಂಜಿನಿಯರಿಂಗ್ ಮುಗಿದ ಮೇಲೆ ಮತ್ತೆ ಹೊಸದಾಗಿ ಪದವಿಪೂರ್ವ ಕಾಲೇಜಿಗೆ ಹೋಗಲು ಇವರಿಗೇನು ಬೇರೆ ಕೆಲಸವಿಲ್ಲವೇ ಎಂದು ಮೂಗು ಮುರಿಯಬೇಡಿ. ಯಾಕೆಂದರೆ ಇದನ್ನೇ ತನ್ನ ಕೆಲಸವಾಗಿಸಿಕೊಳ್ಳುವ ಕನಸಿನಲ್ಲಿ ಅವರು ಹೆಜ್ಜೆ ಮುಂದಿಟ್ಟಿದ್ದಾರೆ!

ವಿಷಯ ಇಷ್ಟೆ. ನಟಿಯಾಗಬೇಕು, ಕನ್ನಡ ಚಿತ್ರರಂಗದಲ್ಲಿ ಒಳ್ಳೆಯ ಸಿನಿಮಾಗಳನ್ನು ಮಾಡಿ ಹೆಸರು ಗಳಿಸಬೇಕು ಎನ್ನುವುದು ಯಶಾ ಕನಸು. ಆ ಕನಸು ಹರಿಪ್ರಸಾದ್ ಜಯಣ್ಣ ಅವರ ನಿರ್ದೇಶನದ 'ಪದವಿಪೂರ್ವ' ಸಿನಿಮಾ ಮೂಲಕ ಈಡೇರುತ್ತಿದೆ.

ಬಣ್ಣದ ಕನಸು ಯಶಾಗೆ ಇತ್ತೀಚೆಗೆ ಹುಟ್ಟಿದ್ದೇನಲ್ಲ. ಬಾಲ್ಯದಲ್ಲಿ ಟೀವಿಯಲ್ಲಿ ಯಾವುದಾದರೂ ಹಾಡುಬಂದರೆ ಹೆಜ್ಜೆ ಕುಣಿಸುತ್ತಿದ್ದರಂತೆ. ಅದನ್ನು ನೋಡಿದ ಅವರ ತಂದೆ ಎಲ್‌ಕೆಜಿಗೆ ಸೇರಿಸುವ ಜೊತೆಗೇ ಭರತನಾಟ್ಯಂ ತರಗತಿಗೂ ಸೇರಿಸಿದರು. ಅಲ್ಲಿ ಯಶಾ ನೃತ್ಯಾಭಿವ್ಯಕ್ತಿಗೊಂದು ಶಾಸ್ತ್ರೀಯ ಚೌಕಟ್ಟು ಸಿದ್ಧಗೊಂಡಿತು.

ಆಳ್ವಾಸ್ ಕಾಲೇಜಿಗೆ ಹೋಗಿ ಸೇರಿಕೊಂಡ ಮೇಲೆ ಅವರು ಕಥಕ್, ಮೋಹಿನಿಯಾಟ್ಟಂ, ಲಾವಣಿ, ಮಣಿಪುರಿ ನೃತ್ಯಗಳನ್ನೆಲ್ಲ ಪರಿಚಯಿಸಿಕೊಂಡರು. ಆ ಕಾಲೇಜು ದಿನಗಳೇ ಅವರ ಬದುಕಿಗೊಂದು ತಿರುವು ಕೊಟ್ಟಿದ್ದು. ಮಂಗಳೂರಿನಲ್ಲಿ ನಡೆದ